

# ನಾನೂ ನನ್ನ ಕರಾಟೆ

■ ವಿನು ಗಂಗೆ
ಕಲೆ: ಸಂತೋಷ್ ಸಸಿಹಿತ್ಲು

ಬಯಲುಸೀಮೆಯಾದ ಮಂಡ್ಯದ ನಮ್ಮ ಅಜ್ಜಿ ಇರಲಿ, ಅರೆಮಲೆನಾಡಿನ ನಮ್ಮ ಅತ್ತೆ ಇರಲಿ, ನನ್ನ ವಾರಿಗೆ ಗೆಳತಿಯರಿರಲಿ, ಕರ್ನಾಟಕದಾದ್ಯಂತ ಮೂರು ತಲೆಮಾರಿನ ನಾರಿಯರಿಗೆ ಒಬ್ಬನೇ ಕನಸಿನ ರಾಜಕುಮಾರ. ಕುಡಿತ, ಬೀಡಿಯ ದಮ್ ಇಲ್ಲದೇ, ಮಚ್ಚು ಲಾಂಗಿನ ಹಂಗಿಲ್ಲದೇ ಬಿಸಿಬಿಸಿ ಕಜ್ಜಾಯ ಕೊಟ್ಟು, ದುಷ್ಟರನ್ನೂ ಒಳ್ಳೆಯ ದಾರಿಗೆ ತರುವ ಬಂಗಾರದ ಮನುಷ್ಯನನ್ನು ನೋಡಿ ಜನ ಸುಮಾರು ಅರ್ಧ ಶತಮಾನದ ಕಾಲ ಗಂಡು ಎಂದರೆ ಗಂಡೂ ಎನ್ನುವಂತಿದ್ದದ್ದು ಒಬ್ಬನೇ, ಅದು ಡಾ. ರಾಜ್‌ಕುಮಾರ್.

ರಾಜ್ ಯುಗದ ಆ ಅರ್ಧ ಶತಮಾನದ ಕೊನೆಯ ಭಾಗದಲ್ಲಿ, ಎಂಜಿನಿಯರಿಂಗ್ ಕಾಲೇಜಿನಲ್ಲಿ ಕೊನೆಯ ವರ್ಷ ಓದುತ್ತಿದ್ದೆ. ಸಾಧಾರಣವಾಗಿ ಕಾಲೇಜು ಬಸ್ಸಿನ ಚಾಲಕರು ನಮಗೇನೂ ಕನಿಕರಿಸುತ್ತಿರಲಿಲ್ಲ. ನಾವು ಓಡಿ ಬರುತ್ತಿದ್ದರೂ ನಮ್ಮನ್ನು ಬಿಟ್ಟು ಹೋಗುವುದೂ, ಬಸ್ ನಿಲ್ದಾಣದಲ್ಲಿ ನಿಲ್ಲಿಸದೆ ಹಿಂದಕ್ಕೋ ಮುಂದಕ್ಕೋ ದೂರ ನಿಲ್ಲಿಸಿ ನಮ್ಮನ್ನು ಓಡುವಂತೆ ಮಾಡುವುದು ಮಾಮೂಲಾಗಿತ್ತು. ಅರ್ಜುನನ ಬತ್ತಳಿಕೆಯಲ್ಲಿ ಬಾಣಗಳನ್ನಿಟ್ಟಂತೆ, ಬೆನ್ನಿಗೆ ಏರಿಸಿದ ಚೀಲದಲ್ಲಿ ಮಿನಿ ಡ್ರಾಫ್ಟರ್, ಊಟ, ನೀರಿನ ಬಾಟಲಿ, ಪುಸ್ತಕಗಳು ತುಂಬಿಸಿಕೊಂಡು ಬಸ್ ಹತ್ತಲು ಓಡುತ್ತಿದ್ದೆವು. ಇದು ಸಾಮಾನ್ಯವಾಗಿದ್ದರಿಂದ ಬೇಸರಿಸುತ್ತಿದ್ದೆವೆಂದು ಹೇಳಲಾಗದು.

ಇದರಲ್ಲಿ ಒಬ್ಬ ಯುವ ಚಾಲಕನಿದ್ದನು. ಇತರ ಚಾಲಕರಂತಲ್ಲದೆ, ನಿಲ್ದಾಣದಲ್ಲಿ ಬಸ್ ನಿಲ್ಲಿಸುವುದೂ, ಓಡಿ ಬರುವುದು ಕಂಡರೆ ನಿಲ್ಲಿಸುವುದೂ ಮೊದಲಾಗಿ ವಿದ್ಯಾರ್ಥಿಗಳ ಬಗ್ಗೆ ಅಂತಃಕರಣವುಳ್ಳವನಾಗಿದ್ದನು. ಚಾಲಕರಿಗೆ ಆಗಾಗ್ಗೆ ಮಾರ್ಗ ಬದಲಾವಣೆ ಇರುತ್ತಿದ್ದರಿಂದ ಕೆಲವೊಮ್ಮೆ ಮಾತ್ರ ಇವನು ಬರುತ್ತಿದ್ದನು. ಹೀಗೊಮ್ಮೆ ಹುಡುಗನೊಬ್ಬನು ನಮ್ಮ ಬಸ್‌ಗೆ ಕೈ ಮಾಡಲಾಗಿ ಅವನನ್ನು ಹತ್ತಿಸಿಕೊಳ್ಳಲು ನಮ್ಮ ಸಾಧು ಚಾಲಕನು ರಸ್ತೆ ಬದಿಗೆ ಗಾಡಿ ತರಬೇಕಾಯಿತು. ಇದರಿಂದ ಬಹುಶಃ ಹಿಂದೆ ಇದ್ದ ಬಿಟಿಎಸ್ ಚಾಲಕನಿಗೆ ತುರ್ತಾಗಿ ಬ್ರೇಕ್ ಹಾಕಬೇಕಾಗಿರಬಹುದು. ಮುಗ್ಗರಿಸಿದಂತಾಗಿ ಅವನಿಗೆ ನಮ್ಮ ಚಾಲಕನ ಮೇಲೆ ಕೋಪ ಉಕ್ಕಿತು.

ಓವರ್ ಟೇಕ್ ಮಾಡಿ ಬಂದು ಬೈಯಲು ಶುರು ಮಾಡಿದನು. ನಮ್ಮ ಸಾಧು ಚಾಲಕನು ಏನೂ ಹೇಳಲು ತೋಚದೆ ಸುಮ್ಮನಾದನು. ಪುನಃ ಗಾಡಿ ಹೊರಟಿತು. ಸರಿಯಾಗಿ ಬಿಟಿಎಸ್ ಡಿಪೊ ಮುಂದೆ ಬರುವ ಸಮಯ ಬಿಟಿಎಸ್ ಚಾಲಕನು ಗಾಡಿಯನ್ನು ನಮ್ಮ ಕಾಲೇಜು ಬಸ್ಸಿನ ಮುಂದೆ ತಂದು ರಸ್ತೆಯಲ್ಲಿ ನಿಲ್ಲಿಸಿಬಿಟ್ಟನು. ಡಿಪೊದಿಂದ ಸುಮಾರು ಜನ ಖಾಕಿಯಲ್ಲಿ ಬಂದು ನಮ್ಮ ಚಾಲಕನನ್ನು ಬಸ್‌ನಿಂದ ಹೊರಗೆಳೆದು ಹೊಡೆಯಲು ಶುರು ಮಾಡಿದರು. ನನಗೆ ಇಶ್ಶೀ ಅನ್ನಿಸಿದ್ದು ಇಲ್ಲೇ.

ನಮ್ಮ ಬಸ್ಸಿನಲ್ಲಿ ಹಲವು ಹುಡುಗರು ಇದ್ದರೂ, ಒಬ್ಬ ಹುಡುಗನೂ ಚಾಲಕನ ಸಹಾಯಕ್ಕೆಂದು ಮುಂದೆ ಬರಲಿಲ್ಲ. ಅವನನ್ನು ಎಲ್ಲರೂ ಸೇರಿ ಹೊಡೆಯುವುದನ್ನು ಬಸ್ಸಿನಲ್ಲೇ ನಿಂತು ನೋಡಿದರೇ ವಿನಃ ತಮಗಾಗಿ ತೊಂದರೆಗೆ ಸಿಲುಕಿದವನನ್ನು ರಕ್ಷಿಸುವ ಮನಸ್ಸು ಅವರಾರಿಗೂ ಬರಲಿಲ್ಲ. ಚೆನ್ನಾಗಿ ಹೊಡೆಸಿಕೊಂಡ ನಂತರ ಸಾಧು ಚಾಲಕ ನಮ್ಮನ್ನು ಕಾಲೇಜಿಗೆ ಕರೆದೊಯ್ದನು. ಇದನ್ನು ನೋಡಿ ನನಗೆ ಪೇಟೆ ಹುಡುಗರು ಸಿಗರೇಟು ಬೈಕಿಗಷ್ಟೇ ಗಂಡು ಹುಡುಗರು ಎನ್ನಿಸಿತು. ಮೌಲ್ಯ, ಆದರ್ಶದ ರಾಜ್‌ಕುಮಾರ್‌ನ ಕನಸು ಕಾಣುತ್ತಿದ್ದ ನನಗೆ ಪೇಟೆ ಹುಡುಗರ ಗುಂಪು ಹೇಡಿಗಳ ಹಿಂಡಿನಂತೆ ಕಾಣತೊಡಗಿತು. ಮನೆಗೆ ಬಂದ ಮೇಲೂ ಆ ಘಟನೆಯಲ್ಲಿ ಸಹಾಯ ಮಾಡಲಾಗದ ನನ್ನ ಅಸಹಾಯಕತೆ ನೆನೆದು ದುಃಖ ಬರುತ್ತಿತ್ತು.

ಅಪ್ಪ ಯಾವಾಗಲೂ 'ಅಳುವುದು ಹೇಡಿಗಳ ಲಕ್ಷಣ' ಎಂದು ಹೇಳುತ್ತಿದ್ದರಿಂದ ಅಳದಾದೆ. ಸರಿ, ಮತ್ತೇನು ಮಾಡಲಿ? 'ಧೈರ್ಯಂ ಸರ್ವತ್ರ ಸಾಧನಂ' ಎಂಬ ಅಪ್ಪನ ಇನ್ನೊಂದು ಮಾತು ನೆನಪಾಯಿತು. ನೇರವಾಗಿ ಅಪ್ಪನ ಬಳಿ ಹೋಗಿ ಹೇಳಿದೆ, 'ಅಪ್ಪ, ನಾನು ಕರಾಟೆ ಕಲಿಯಲು ಸೇರುತ್ತೇನೆ'. ಮೊದಲಿನಿಂದಲೂ ನಾನು ಏನು ಮಾಡಲು ಹೋದರೂ 'ಮಾಡು ಮಗನೇ, ನೀನು ಚೆನ್ನಾಗಿ ಮಾಡ್ತೀಯಾ' ಎನ್ನುತ್ತಿದ್ದ ಅಪ್ಪ 'ಆಗಲಿ' ಎಂದರು. ಮನೆಯಿಂದ ನಾಲ್ಕೈದು ಮೈಲು ದೂರದ ಕರಾಟೆ ಶಾಲೆಗೆ ಸೇರಿದೆ.

ಸುಮಾರು 50–60 ಹುಡುಗರು ಇದ್ದ ಆ ಶಾಲೆಯಲ್ಲಿ ನಾನೊಬ್ಬಳೇ ಹುಡುಗಿ. ಹೋಗಿ ನಿಂತ ಕೂಡಲೇ ಕೈಕಾಲು ಬೆವರಲು ಶುರುವಾಯಿತು. ಮತ್ತೆ ಆ ಸಾಧು ಚಾಲಕನ ಘಟನೆ ನೆನಪಿಗೆ ಬಂದು ಧೈರ್ಯ ತಂದುಕೊಂಡೆ. ಸರಿ, ಶುರುವಾಯಿತು ನನ್ನ ಕರಾಟೆ. ಅಲ್ಲೀ ತನಕ ಯೋಗ–ಧ್ಯಾನ ಎಂದು ಉಪದೇಶ ಹೇಳುತ್ತಿದ್ದ ನಾನು ಕರಾಟೆ ಸೇರಿದ್ದು ನೋಡಿ 'ಓಂ ಹೋಗಿ ಹ್ಹಾ ಹ್ಹು ಬಂತು' ಅಂತ ಎಲ್ಲರೂ ಅಣಕಿಸುತ್ತಿದ್ದರು. ನಾನು ಮಾತ್ರ ಹ್ಹು ಹ್ಹು ಎಂದು ಶ್ರದ್ಧೆಯಿಂದ ಕಲಿಯುತ್ತಿದ್ದೆ.